## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 16 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2022 |
| ಉತ್ತರಿಸುವ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಅಕ್ಷರ ದಾಸೋಹ ಬಿಸಿಯೂಟ ಯೋಜನೆಯಲ್ಲಿ ಆಹಾರ ಧಾನ್ಯ ಹಾಗೂ ಸಿಲಿಂಡರ್ ಸರಬರಾಜು ಸಮಸ್ಯೆಯಿಂದಾಗಿ ಬಿಸಿಯೂಟ ಯೋಜನೆಗೆ ಅಡೆತಡೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಳ್ಳಾರಿ ಜಿಲ್ಲೆಯಲ್ಲಿ ಆಹಾರ ಧಾನ್ಯಗಳ ಸಮಸ್ಯೆಯಿಂದ ಶಿಕ್ಷಕರುಗಳು ಬೇರೆ ಬೇರೆ ಶಾಲೆಗಳಿಂದ ಆಹಾರ ಮತ್ತು ಸಿಲಿಂಡರ್‌ಗಳನ್ನು ಎರವಲು ಪಡೆಯುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಆಹಾರಧಾನ್ಯ ಹಾಗೂ ಸಿಲಿಂಡರ್ ಸರಬರಾಜು ಸಮಸ್ಯೆಯಿಂದಾಗಿ ಬಿಸಿಯೂಟ ಯೋಜನೆಗೆ ಅಡೆತಡೆ ಆಗುತ್ತಿರುವುದು ಹಾಗೂ ಈ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಈ ಸಂಬಂಧ ಜಿಲ್ಲಾವಾರು ಬೇಡಿಕೆಯಂತೆ ನವೆಂಬರ್-2022 ಮತ್ತು ಡಿಸೆಂಬರ್-2022ರ ಮಾಹೆಯ 51 ದಿನಗಳಿಗೆ ಅಗತ್ಯವಿರುವ ಸೂರ್ಯಕಾಂತಿ ಅಡುಗೆ ಎಣ್ಣೆ ಕೆ.ಎಫ್.ಸಿ.ಎಸ್.ಸಿ ಸಂಸ್ಥೆಯಿಂದ ಸರಬರಾಜುಗೊಳ್ಳುತ್ತಿದೆ. ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ 2022ರ ಮಾಹೆಗಳಲ್ಲಿ ಸರಬರಾಜುಗೊಂಡಿರುವ ತೊಗರಿಬೇಳೆ, ಅಡುಗೆ ಎಣ್ಣೆ ಮತ್ತು ಅಡುಗೆ ವೆಚ್ಚದ ಸಾದಿಲ್ವಾರು ನವೆಂಬರ್ 2022ರ ಮಾಹೆವರೆಗೂ ಸಾಕಾಗುವಷ್ಟು ಉಳಿಕೆ ಇದ್ದು ಬಳಸಲಾಗುತ್ತಿದೆ.<br><br>ಅಗತ್ಯ ಪ್ರಮಾಣದ ಆಹಾರ ಧಾನ್ಯಗಳನ್ನು ಜಿಲ್ಲಾವಾರು ಬೇಡಿಕೆಯಂತೆ ಈಗಾಗಲೇ ಮಾಡಲಾಗಿದ್ದು, ಒಂದು ವೇಳೆ ಆಹಾರ ಧಾನ್ಯಗಳು ಸರಬರಾಜುಗೊಳ್ಳುವುದು ನಿಧಾನವಾದಲ್ಲಿ, ಅಂತಹ ಯಾವುದೇ ಶಾಲೆಯಲ್ಲಿ ಅಕ್ಕಿ, ಬೇಳೆ ಮತ್ತು ಎಣ್ಣೆ ಕೊರತೆ ಉಂಟಾದಲ್ಲಿ, ಶಾಲೆಗಳಿಗೆ ಪ್ರಸ್ತುತ ಮಾರುಕಟ್ಟೆಯಿಂದ ಶಾಲಾ ಅಕ್ಷರ ದಾಸೋಹ ಖಾತೆಯ ಅಡುಗೆ ವೆಚ್ಚದ ಸಾದಿಲ್ವಾರು ಉಳಿಕೆ ಹಣದಿಂದ ತಾತ್ಕಾಲಿಕವಾಗಿ ಅಗತ್ಯ ಆಹಾರ ಸಾಮಗ್ರಿಗಳನ್ನು ಖರೀದಿಸಿ ದೈನಂದಿನ ಬಿಸಿಯೂಟ ಕಾರ್ಯಕ್ರಮವನ್ನು ಯಾವುದೇ ಅಡಚಣೆ ಇಲ್ಲದೆ ನಡೆಸಲು ಅಗತ್ಯ ಕ್ರಮಕೈಗೊಳ್ಳುವಂತೆ ಶಾಲಾ ಮುಖ್ಯ ಶಿಕ್ಷಕರಿಗೆ ಸೂಚಿಸಲಾಗಿರುತ್ತದೆ.<br><br>ಎಲ್.ಪಿ.ಜಿ ಸಿಲಿಂಡರ್ ಖರೀದಿಸಿರುವ ವೆಚ್ಚದ ಬಿಲ್ಲುಗಳಿಗೆ ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಹಣ ಪಾವತಿಮಾಡಲಾಗಿದೆ. ಉಳಿದಂತೆ ಬಾಕಿ ಬಿಲ್ಲುಗಳು ಸಲ್ಲಿಕೆಯಾದ ತಕ್ಷಣವೇ ಈಗಾಗಲೇ ಬಿಡುಗಡೆಯಾಗಿರುವ 2 ಮತ್ತು 3ನೇ ತ್ರೈಮಾಸಿಕ ಅನುದಾನದಡಿ ಶಾಲೆಗಳಿಗೆ ಸಾದಿಲ್ವಾರು ಪಾವತಿ ಮಾಡಲು ಕ್ರಮವಹಿಸಲಾಗಿದೆ. |
| ಆ) | ಅಕ್ಷರ ದಾಸೋಹಕ್ಕಾಗಿ ನೀಡಬೇಕಾದ ಆಹಾರ ಧಾನ್ಯ ಸರಬರಾಜು ಅವ್ಯವಸ್ಥೆಯಿಂದ ಬಹುತೇಕ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಇಲ್ಲದೇ ಮಕ್ಕಳು ಶಾಲೆಯಿಂದ ಮನೆಗೆ ತೆರಳುವಂತಾಗಿದ್ದು, ಸರ್ಕಾರ ಅಕ್ಷರ ದಾಸೋಹಕ್ಕಾಗಿ ಅನುದಾನವನ್ನು ನಿಗಧಿತ ವೇಳೆಯಲ್ಲಿ ಶಾಲೆಗಳಿಗೆ ನೀಡದಿರಲು ಕಾರಣವೇನು; (ಮಾಹಿತಿ ನೀಡುವುದು). | 2022-23ನೇ ಸಾಲಿನಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಮತ್ತು ಕ್ಷೀರಭಾಗ್ಯ ಯೋಜನೆಗಳನ್ನು ಅನುಷ್ಠಾನ ಮಾಡಲು ಈಗಾಗಲೇ ರೂ 1553.07 ಕೋಟಿಗಳ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ರೂ 1553.07 ಕೋಟಿಗಳ ಅನುದಾನದ ಪೈಕಿ ರೂ 341.75 ಕೋಟಿಗಳ ಅನುದಾನ ಕೇಂದ್ರ ಸರ್ಕಾರದ ಪಾಲಿನ ಅನುದಾನವಾಗಿದೆ. ಕಳೆದ ಸಾಲಿನಲ್ಲಿ ನಿಧಿ-೧ರಡಿ ಲಭ್ಯವಿದ್ದ ರೂ 547.63 ಕೋಟಿಗಳ ಅನುದಾನವನ್ನೂ ಸಹ ಪ್ರಸಕ್ತ ಸಾಲಿನಲ್ಲಿ ಬಳಸಿಕೊಳ್ಳಲು ಆರ್ಥಿಕ ಇಲಾಖೆಯಿಂದ ಸಹಮತಿಯನ್ನು ನೀಡಲಾಗಿರುತ್ತದೆ. ರಾಜ್ಯ ಸರ್ಕಾರದಿಂದ ಸಕಾಲದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯನ್ನು ಅನುಷ್ಠಾನ ಅಗತ್ಯವಿರುವ ಸಂಪೂರ್ಣ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಯೋಜನೆಯ ಉದ್ದೇಶಗಳಿಗೆ ಬಳಕೆಮಾಡುವ ಸಂಬಂಧ ಕಾಲಕಾಲಕ್ಕೆ ಸುತ್ತೋಲೆಯನ್ನು ಹೊರಡಿಸಿ ಮೇಲ್ವಿಚಾರಣೆಯನ್ನು ನಡೆಸಲಾಗುತ್ತಿದೆ. |

<table>
<tr>
<td></td>
<td></td>
<td>ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ಹಾಗೂ ಆರ್ಥಿಕ ಇಲಾಖೆಯ ಸೂಚನೆಯಂತೆ ಕೇಂದ್ರ ಪುರಸ್ಕೃತ ಯೋಜನೆಗಳ ವೆಚ್ಚಗಳನ್ನು ನೂತನವಾಗಿ ಸೃಜಿಸಲಾಗಿರುವ ಕೆ-೨ ಪಿ.ಎಫ್.ಎಂ.ಎಸ್ ತಂತ್ರಾಂಶದ ಮೂಲಕ ಭರಿಸಲಾಗುತ್ತಿದ್ದು, ಆರಂಭದಲ್ಲಿ ಕೆಲವು ತಾಂತ್ರಿಕ ತೊಂದರೆಗಳಿಂದ ಸದರಿ ತಂತ್ರಾಂಶದ ಮೂಲಕ ಯೋಜನೆಗೆ ಸಂಬಂಧಿಸಿದ ವೆಚ್ಚಭರಿಸಲು ವಿಳಂಬವಾಗಿರುತ್ತದೆ. ಆದರೆ ಆರ್ಥಿಕ ಇಲಾಖೆ ಮತ್ತು ಖಜಾನೆ ಇಲಾಖೆಯ ಸಲಹೆ ಹಾಗೂ ನಿರಂತರ ಸಹಕಾರದಿಂದ ಕೆ-೨ ಪಿ.ಎಫ್.ಎಂ.ಎಸ್ ತಂತ್ರಾಂಶವನ್ನು ಅನುಷ್ಠಾನ ಮಾಡುವ ಬಗ್ಗೆ ತಾಲ್ಲೂಕು ಮತ್ತು ಜಿಲ್ಲಾ ಹಂತದ ಅಧಿಕಾರಿಗಳಿಗೆ ಸಕಾಲದಲ್ಲಿ ಸೂಕ್ತ ತರಬೇತಿಯನ್ನು ನೀಡಿ ಮಧ್ಯಾಹ್ನ ಉಪಹಾರ ಯೋಜನೆಯನ್ನು ಸುಗಮವಾಗಿ ಅನುಷ್ಠಾನ ಮಾಡಲಾಗುತ್ತಿದ್ದು, ಯಾವುದೇ ಅನುದಾನದ ಕೊರತೆ ಇರುವುದಿಲ್ಲ. ಅಧೀನ ಕಛೇರಿಗಳಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಸಮುಚಿತ ಮಾರ್ಗದಲ್ಲಿ ಪರಿಹರಿಸುವ ಕಾರ್ಯವನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಕಛೇರಿಯಿಂದ ಕೈಗೊಳ್ಳಲಾಗಿದೆ.</td>
</tr>
<tr>
<td>ಇ)</td>
<td>ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿ ಬಿಸಿಯೂಟ ನೀಡುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು;</td>
<td>
<table>
<tr><th>ಜಿಲ್ಲೆಯ ಹೆಸರು</th><th>ಮಧ್ಯಾಹ್ನ ಉಪಹಾರ ಯೋಜನೆಯಡಿ ಬಿಸಿಯೂಟ ನೀಡುತ್ತಿರುವ ಒಟ್ಟು ಶಾಲೆಗಳ ಸಂಖ್ಯೆ</th></tr>
<tr><td>ಬಳ್ಳಾರಿ</td><td>743</td></tr>
<tr><td>ವಿಜಯನಗರ</td><td>1236</td></tr>
<tr><td>ಒಟ್ಟು</td><td>1979</td></tr>
</table>
</td>
</tr>
<tr>
<td>ಈ)</td>
<td>ಈ ಶಾಲೆಗಳಿಗೆ ನೀಡುತ್ತಿರುವ ಆಹಾರ ಧಾನ್ಯ ಮತ್ತು ಅನಿಲ ಸಿಲಿಂಡರ್‌ಗಳನ್ನು ಸರಬರಾಜು ಮಾಡುತ್ತಿರುವ ಗುತ್ತಿಗೆದಾರರುಗಳ ಮಾಹಿತಿ ಹಾಗೂ ಅವರುಗಳಿಗೆ ನೀಡಲಾದ ಟೆಂಡರ್ ಗಳನ್ನು ಯಾವಾಗ ನೀಡಲಾಯಿತು ಟೆಂಡರ್‌ಗಳ ಪೂರ್ಣ ವಿವರಗಳೊಂದಿಗೆ ತಾಲ್ಲೂಕುವಾರು ಮಾಹಿತಿ ನೀಡುವುದು?</td>
<td>ಪ್ರತಿ ರಾಜ್ಯಗಳಿಗೆ ಸಂಬಂಧಿಸಿದಂತೆ ಎಲ್.ಪಿ.ಜಿ ಸಿಲಿಂಡರ್‌ಗಳ ದರಗಳನ್ನು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಕಂಪನಿಗಳು ನಿಗದಿಪಡಿಸುತ್ತವೆ. ಪೆಟ್ರೋಲಿಯಂ ಕಂಪನಿಗಳು ನಿಗದಿಪಡಿಸಿದ ದರದಲ್ಲಿ ಕಂಪನಿಗಳ ಅಧಿಕೃತ ಏಜೆನ್ಸಿಗಳ ಮೂಲಕ ಎಲ್.ಪಿ.ಜಿ ಸಿಲಿಂಡರ್‌ಗಳನ್ನು ಖರೀದಿಸಲಾಗುತ್ತದೆ. ಎಲ್.ಪಿ.ಜಿ ಸಿಲಿಂಡರ್‌ಗಳ ದರವು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಕಂಪನಿಗಳ ನಿಯಂತ್ರಣಕ್ಕೆ ಒಳಪಡುವುದರಿಂದ ಮಧ್ಯಾಹ್ನ ಉಪಹಾರ ಯೋಜನೆಗೆ ಅಗತ್ಯವಿರುವ ಎಲ್.ಪಿ.ಜಿ ಸಿಲಿಂಡರ್‌ಗಳನ್ನು ಟೆಂಡರ್ ಕರೆದು ಖರೀದಿಸಲು ಸಾಧ್ಯವಾಗುವುದಿಲ್ಲ.<br><br>ಮಧ್ಯಾಹ್ನ ಉಪಹಾರ ಯೋಜನೆಗೆ ಅಗತ್ಯವಿರುವ ಆಹಾರಧಾನ್ಯಗಳನ್ನು ಭಾರತೀಯ ಆಹಾರ ನಿಗಮದ ಮೂಲಕ ಖರೀದಿಸಲಾಗುತ್ತದೆ. ಈ ಆಹಾರಧಾನ್ಯಗಳನ್ನು ಶಾಲೆಗಳಿಗೆ ಸಾಗಾಣಿಕೆ ಮಾಡಲು ಜಿಲ್ಲಾ ಹಂತದಲ್ಲಿ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗುತ್ತದೆ.<br><br>ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಮಧ್ಯಾಹ್ನ ಉಪಹಾರ ಯೋಜನೆಗೆ ಅಗತ್ಯವಿರುವ ಎಲ್.ಪಿ.ಜಿ ಸಿಲಿಂಡರ್‌ಗಳನ್ನು ಸರಬರಾಜು ಮಾಡುತ್ತಿರುವ ಗ್ಯಾಸ್ ಏಜೆನ್ಸಿಗಳ ವಿವರಗಳನ್ನು ಮತ್ತು ಆಹಾರಧಾನ್ಯಗಳನ್ನು ಶಾಲೆಗಳಿಗೆ ಸಾಗಾಣಿಕೆ ಮಾಡಲು ಗುತ್ತಿಗೆ ನೀಡಲಾಗಿರುವ ಗುತ್ತಿಗೆದಾರರ ವಿವರ ಹಾಗೂ ಟೆಂಡರ್‌ಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧಿಸಿದೆ. **(ಅನುಬಂಧ-೧)**</td>
</tr>
</table>

ಇಪಿ 70 ಎಂಎಂಎಸ್ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ
ಸಕಾಲ ಸಚಿವರು.

## ಅನುಬಂಧ-1

**1) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಎಲ್.ಪಿ.ಜಿ ಸಿಲಿಂಡರ್‌ಗಳನ್ನು ಸರಬರಾಜು ಮಾಡುತ್ತಿರುವ ಗ್ಯಾಸ್ ಏಜೆನ್ಸಿಗಳ ತಾಲ್ಲೂಕುವಾರು ವಿವರ**

| ತಾಲ್ಲೂಕು ಹೆಸರು | ಗ್ಯಾಸ್ ಏಜೆನ್ಸಿಗಳ ವಿವರ |
|---|---|
| ಬಳ್ಳಾರಿ ಮತ್ತು ಕುರುಗೋಡು | 1) ಜೆ.ಆರ್ ಹೆಚ್.ಪಿ.ಗ್ಯಾಸ್ ಗ್ರಾಮೀಣ ವಿತರಕ್ ಮೋಕ.<br>2) ಬುಶ್ಯಪ್ಪ ಬಾರತ್‌ಗ್ಯಾಸ್ ಗ್ರಾಮೀಣ ವಿತರಕ್ ರೂಪನಗುಡಿ.<br>3) ಲಕ್ಷ್ಮೀ ನರಸಿಂಹ ಭಾರತ್ ಗ್ಯಾಸ್ ಕಂಪನಿ ಬಳ್ಳಾರಿ.<br>4) ಲಕ್ಷ್ಮಿ ಇಂಡಿಯಾನ್ ಗ್ಯಾಸ್ ಸರ್ವೀಸ್ಸ್ ಬಳ್ಳಾರಿ.<br>5) ಶಿರಿಡಿ ಸಾಯಿ ಹೆಚ್‌ಪಿ ಗ್ಯಾಸ್ ಗ್ರಾಮೀಣ ವಿತರಕ್, ಎಮ್ಮಿಗನೂರು.<br>6) ಶ್ವೇತ ಭಾರತ್ ಗ್ಯಾಸ್ ಗ್ರಾಮೀಣ ವಿತರಕ್ ಸೋಮಸಮುದ್ರ. |
| ಸಿರುಗುಪ್ಪ | 1) ಶ್ರೀ ಕೃಷ್ಣ ಗ್ಯಾಸ್ ಸರ್ವಿಸ್ ಸಿರುಗುಪ್ಪ.<br>2) ಶ್ರೀ ಗಂಗಾಪರಮೇಶ್ವರಿ ಇಂಡೇನ್ ಗ್ರಾಮಿಣ ವಿತರಕ್ ಸಿರಿಗೇರಿ. |
| ಸಂಡೂರು | ಶ್ರೀ ಮಾಯೂರ್ ಎಂಟರ್ ಪ್ರೈಸಸ್ಸ್ ಹೆಚ್.ಪಿ.ಗ್ಯಾಸ್ ವಿತರಕರು ಸಂಡೂರು. |
| ಹರಪನಹಳ್ಳಿ | 1) ಶ್ರೀ ವಿಜಯ ಲಕ್ಷ್ಮೀ ಗ್ಯಾಸ್ ಏಜೆನ್ಸಿ.<br>2) ರೆಡ್ಡಿ ಗ್ಯಾಸ್ ಏಜೆನ್ಸಿ.<br>3) ಜ್ಯೋತಿ ಗ್ಯಾಸ್ ಏಜೆನ್ಸಿ.<br>4) ದೇವನಗರಿ ಗ್ಯಾಸ್ ಏಜೆನ್ಸಿ. |
| ಹಗರಿಬೊಮ್ಮನಹಳ್ಳಿ | 1) ಶ್ರೀ ಮಾತಾ ಗ್ಯಾಸ್ ಹಗರಿಬೊಮ್ಮನಹಳ್ಳಿ.<br>2) ಶ್ರೀ ಅಂಜಿನಾದ್ರೀ ಗ್ರಾಮೀಣ್ ವಿತರಕ್ ಬನ್ನಿಕಲ್ಲು. |
| ಹೂವಿನ ಹಡಗಲಿ | 1) ಶ್ರೀ ಮಹದೇವ ತಾತ ಇಂಡಿಯನ್ ಗ್ಯಾಸ್.<br>2) ಬೆಟ್ಟದಶ್ರೀ ಗ್ರಾಮೀಣ ಅನಿಲ ವಿತರಕರು.<br>3) ಸುರಭಿ ಭಾರತ್ ಗ್ಯಾಸ್. |
| ಕೂಡ್ಲಿಗಿ ಮತ್ತು ಕುಟ್ಟೂರು | 1) ಹೆಚ್.ಪಿ ಗ್ಯಾಸ್ ಕೊಟ್ಟೂರು.<br>2) ಶ್ರೀ ಮಹದೇವ ಭಾರತ್ ಗ್ಯಾಸ್ ಉಜ್ಜಯನಿ. |
| ಹೊಸಪೇಟೆ ಮತ್ತು ಕಂಪ್ಲಿ | 1)ಶರತ್ ಗ್ಯಾಸ್ ಡಿಸ್ಟ್ರಿಬ್ಯುಟರ್ಸ್ ಕಂಪಲಿ.<br>2)ಶ್ರೀ ಬಾಲಾಜಿ ಗ್ಯಾಸ್ ಕಂಪನಿ ಕಮಲಪುರ.<br>3)ರಾಜ್ ಇಂಡೆನ್ ಹೊಸಪೇಟೆ<br>3)ಭಾರತ್ ಗ್ಯಾಸ್, ಸ್ಟೇಷನ್ ರಸ್ತೆ, ಹೊಸಪೇಟೆ.<br>4)ಯುವರಾಜ ಭಾರತ್ ಗ್ಯಾಸ್ ಗ್ರಾಮೀಣ ವಿತರಕ್ ಎಂಎಂ ಹಳ್ಳಿ. |

**2) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಆಹಾರಧಾನ್ಯಗಳನ್ನು ಸಾಗಾಣಿಕೆ ಮಾಡುತ್ತಿರುವ ಗುತ್ತಿಗೆದಾರರ ಮತ್ತು ಗುತ್ತಿಗೆದಾರರಿಗೆ ಟೆಂಡರ್‌ಗಳನ್ನು ನೀಡಲಾಗಿರುವ ತಾಲ್ಲೂಕುವಾರು ವಿವರ**

| ತಾಲ್ಲೂಕು ಹೆಸರು | ಗುತ್ತಿಗೆದಾರರ ಮತ್ತು ಗುತ್ತಿಗೆದಾರರಿಗೆ ಟೆಂಡರ್‌ಗಳನ್ನು ನೀಡಲಾಗಿರುವ ವಿವರ |
|---|---|
| ಬಳ್ಳಾರಿ ಮತ್ತು ಕುರುಗೋಡು | ಸೋನಿಕಾ ಎಂಟರ್ ಪ್ರೈಸಸ್ಸ್ ಸಿಂಧನೂರು ಮಾಲಿಕರು ಶ್ರೀ ದೊಡ್ಡ ಬಸವನಗೌಡ. 2021-22ನೇ ಸಾಲಿನಲ್ಲಿ ಟೆಂಡರ್ ಆಗಿದ್ದು. 2022-23ನೇ ಸಾಲಿಗೆ ಟೆಂಡರ್ ಜಿಲ್ಲಾ ಹಂತದಲ್ಲಿ ಆದಕಾರಣ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ ಬಳ್ಳಾರಿ ಇವರು ಹಳೇ ಟೆಂಡರ್ ದಾರರಿಂದ ಸಾಗಾಣಿಕೆ ಮಾಡಲು ಆದೇಶ ನೀಡಿರುತ್ತಾರೆ. |

| ತಾಲ್ಲೂಕು ಹೆಸರು | ಗುತ್ತಿಗೆದಾರರ ಮತ್ತು ಗುತ್ತಿಗೆದಾರರಿಗೆ ಟೆಂಡರ್‌ಗಳನ್ನು ನೀಡಲಾಗಿರುವ ವಿವರ |
|---|---|
| ಸಿರುಗುಪ್ಪ | ಶ್ರೀ ಬಸವೇಶ್ವರ ಟ್ರಾನ್ಸ್ ಪೋರ್ಟ್ ಎ.ಪಿ.ಎಂ.ಸಿ ಯಾರ್ಡ್ ಮಾನವಿ (ಜೂನ್–2022 ರಂದು ಟೆಂಡರ್ ನೀಡಲಾಗಿದೆ.) |
| ಸಂಡೂರು | ವೀರೇಶ್ವರ ಎಂಟರ್ ಪ್ರೈಸಸ್ ಸಿಂಧನೂರು. 2021–22ನೇ ಸಾಲಿನಲ್ಲಿ ಟೆಂಡರ್ ಹಾಗಿದ್ದು. 2022–23ನೇ ಸಾಲಿಗೆ ಟೆಂಡರ್ ಜಿಲ್ಲಾ ಹಂತದಲ್ಲಿ ಆದಕಾರಣ ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ ಬಳ್ಳಾರಿ ಇವರು ಹಳೇ ಟೆಂಡರ್ ದಾರರಿಂದ ಸಾಗಾಣಿಕೆ ಮಾಡಲು ಆದೇಶ ನೀಡಿರುತ್ತಾರೆ. |
| ಹರಪನಹಳ್ಳಿ | ಬಿ.ಪೀರಾ ಟ್ರಾನ್ಸ್ ಪೋರ್ಟ್ (ದಿನಾಂಕ:10/06/2022 ರಂದು ಟೆಂಡರ್ ನೀಡಲಾಗಿದೆ.) |
| ಹಗರಿಬೊಮ್ಮನಹಳ್ಳಿ | ಶ್ರೀ ಬಾಲಾಜಿ ಟ್ರಾನ್ಸ್ ಪೋರ್ಟ್ – (ದಿನಾಂಕ: 23.06.2022 ರಂದು ಟೆಂಡರ್ ನೀಡಲಾಗಿದೆ.) |
| ಹೂವಿನ ಹಡಗಲಿ | ಬಸವನಗೌಡ ಪಾಟೀಲ್ 2021–22ನೇ ಸಾಲಿನ ತಾಂತ್ರಿಕ ಕಾರಣಗಳಿಂದಾಗಿ 2022–23ನೇ ಸಾಲಿಗೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ.ವಿಜಯನಗರ ಇವರ ಅನುಮತಿಯೊಂದಿಗೆ ಟೆಂಡರ್ ಆಗುವವರೆಗೂ ಮುಂದುವರೆಸಿದೆ. |
| ಕೂಡ್ಲಿಗಿ ಮತ್ತು ಕುಟ್ಟೂರು | ವೀರಭದ್ರೇಶ್ವರ ಟ್ರಾನ್ಸ್ ಪೋರ್ಟ್ (ದಿನಾಂಕ:07/07/2022 ರಂದು ಟೆಂಡರ್ ನೀಡಲಾಗಿದೆ.) |
| ಹೊಸಪೇಟೆ ಮತ್ತು ಕಂಪ್ಲಿ | ಡಿ. ಮಲ್ಲಿಕಾರ್ಜುನ, ಗಂಗಾವತಿ ಆಹಾರ ಧಾನ್ಯ ಟ್ರಾನ್ಸ್ ಪೋರ್ಟ್ ವಿತರಕರು (ದಿನಾಂಕ: 12.08.2022 ರಂದು ಟೆಂಡರ್ ನೀಡಲಾಗಿದೆ.) |